was a case where the Deputy Commissioner had not been transferred after three years. He has since been transferred.

(*b*) Yes; there are cases of Assistant Commissioners in South Kanara District transferred within a period of three years since September 1962, the reasons being in the interest of public service and the exigencies of administration. There is no case where an Assistant Commissioner has not been transferred after three years.

Transfer of Officers

168. Smt. WINNIFRED F. FERNANDES (Coondapur).—

Will the Chief Minister be pleased to state :—

(*a*) whether any Superintendent of Police of Mysore, Chickmaglur, Coorg and South Kanara Districts has been transferred within a period of three years since September 1962 and if so, the reasons for the same and whether there are any cases where a Superintendent of Police of Mysore has not been transferred even after three years and if so, the reasons for such retention ;

(*b*) whether any Assistant Superintendent of Police, Mangalore, Puttur and Udipi in South Kanara has been transferred within a period of 3 years since September 1962 and, if so, the reasons for the same and whether there are any cases where an Assistant Superintendent of Police has not been transferred even after three years and, if so, the reasons for such retention ?

Sri. VEERENDRA PATIL (Chief Minister).—

(*a*) Yes ; there are cases of Superintendents of Police transferred within a period of 3 years since September 1962. These transfers were necessitated by the exigencies of administration. There is no case where a Superintendent of Police has not been transferred after three years.

(*b*) Yes; there are cases of Assistant Superintendents of Police transferred within a period of 3 years since September 1962 ; reasons of such transfers are the exigencies of administration. There is no instance of Assistant Superintendent of Police who was not transferred even after three years.

Smt. WINNIFRED F. FERNANDES:—In reply to (*a*) you have said that Deputy Commissioners are transferred within a period of 3 years, the reasons being interest of public service. May I know why this particular Deputy Commissioner was not transferred even after three years ? Is it in the interest of public service or is it due to the political backing he had ?

† Sri VEERENDRA PATIL.—So far as officers are concerned, there are no political considerations at all. Whoever is there in the Government, officers have to do their duty. They have to run the administration and so long they are asked to continue they are there to continue. The Deputy Commissioner that the hon. Member is referring to, has been transferred.

Smt. WINNIFRED F. FERNANDES.—It is said that one of the Assistant Commissioners was transferred within a period of two years just because he did not bend his head to some of the Congressmen ?

Sri VEERENDRA PATIL.—No Sir.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ವಾಮಿ, ಈಗ ತಾವು ಏನು ಹೇಳಿದ್ದೀರಿ, ಇದಕ್ಕೆ ಸಂಬಂಧಪಟ್ಟ ಜಿಲ್ಲಾಧಿಕಾರಿ ಬಹಳ ಅನ್ಯಾಯ ಮಾಡುತ್ತಾರೆ, ಮೂರು ವರ್ಷಕ್ಕೂ ಮೇಲಿದ್ದಾರೆ, ಅವರನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ಜಿಲ್ಲೆಯ 8 ಮಾನ್ಯ ಸದಸ್ಯರು ತಮ್ಮಲ್ಲಿ ಹೇಳಿದಾಗ್ಯೂ ಸಹ ತಾವು ಅವರನ್ನು ಟ್ರಾನ್ಸ್‌ಫರ್ ಮಾಡದೆ, ಈಗ ಈ ಪ್ರಶ್ನೆ ಬಂದಾಗ ಮಾಡಲು ಬಲವಾದ ಕಾರಣಗಳೇನು ?

ಶ್ರೀ ವೀರೇಂದ್ರ ಪಾಟೀಲ್.—ಈ ಪ್ರಶ್ನೆ ಬಂದಮೇಲೆ ಟ್ರಾನ್ಸ್‌ಫರ್ ಮಾಡಿಲ್ಲ. ಮತ್ತು ಮಾನ್ಯ ಸದಸ್ಯರು 5-6 ವಿರೋಧ ಪಕ್ಷದ ಜನರು ಬಂದು ಅವರನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ಕೇಳಿದಾಗ ಟ್ರಾನ್ಸ್‌ಫರ್ ಮಾಡಲಿಲ್ಲ. ಬಹುಶಃ ಈ ರೀತಿಯಿಂದ ಯಾರಾದರೂ ಮಾನ್ಯ ಸದಸ್ಯರು ಬಂದು ಇಂಥವನನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ಕೇಳಿದಾಗ ಆ ರೀತಿ ಮಾಡಬಾರದಾಗುತ್ತದೆ, ಏಕೆಂದರೆ, ಈ ರೀತಿಯಿಂದ ಟ್ರಾನ್‌ಫರ್ ಮಾಡಿದರೆ, ಯಾರಾದರೂ ಹೋಗಿ, ಯಾರಿಗಾದರೂ ಟ್ರಾನ್ಸ್‌ಫರ್ ಮಾಡಿಕೊಳ್ಳಬಹುದೆಂದು ಅರ್ಥವಾಗುತ್ತದೆ.

(Sri Vatal Nagaraj rose and interrupted)

ಯಾರಾದರೂ ಕೇವಲ ಸದಸ್ಯರು ಬಂದು ಅವರನ್ನು ಅಲ್ಲಿಂದ ತೆಗೆಯಬೇಕೆಂದರೆ ನಾನು ತೆಗೆಯುವುದಕ್ಕೆ ತಯಾರು ಇಲ್ಲ. ಆ ರೀತಿ ಮಾಡಿದರೆ ಅಧಿಕಾರಿಗಳಲ್ಲಿ ಡಿಮಾರಲೈಜ್ ಎಫೆಕ್ಟ್ ಆಗುತ್ತದೆ.

Mr. SPEAKER.—Will Sri, Vatal Nagaraj, sit down ? The hon. Chief Minister is answering.

ಶ್ರೀ ವಾಟಾಳ್ ನಾಗರಾಜ್.—ಏನು ಸ್ವಾಮಿ, ಕೇವಲ ಸದಸ್ಯರು ಅಂತಾರೆ. ಜವಾಬ್ದಾರಿಯುತವಾಗಿ ಮಾತನಾಡಲು.....

Mr. SPEAKER.—Sri Sivappa, will kinly call Sri Vatal Nagaraj to order ?

Sri S. SIVAPPA.—I request Sri Vatal Nagaraj to put his supplementary after the Chief Minister completes his answer.

ಶ್ರೀ ವಾಟಾಳ್ ನಾಗರಾಜ್.—ನಾವೇನು ಕಡಲೆಕಾಯಿ ತಿನ್ನುವುದಕ್ಕೆ ಅವರ ಆಫೀಸಿಗೆ ಹೋಗುವುದಿಲ್ಲ. ಕೇವಲ ಒಬ್ಬರು ಸದಸ್ಯರು ಬಂದು ಹೇಳಿದರೆ ಎಂದೇನು ?

Mr. SPEAKER.—The hon. Member should know that when a supplementary is put, it has to be answered and it is only after listening completely to the answer, a subsequent supplementary is permitted. Sri Vatal Nagaraj is obstructing the hon. Chief Minister from replying. I am afraid the Marshal has to be called.

ಶ್ರೀ ವಾಚಾಳ್ ನಾಗರಾಜ್.—ಸ್ವಾಮಿ, ನಾನೇನು ಮುಖ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಅಡ್ಡಿ ಮಾಡುವುದಿಲ್ಲ. ಕೇವಲ ಸದಸ್ಯರು ಎಂದರೇನು ?

ಶ್ರೀ ವೀರೇಂದ್ರ ಪಾಟೀಲ್.—ಈಗ ಮಾನ್ಯ ಸದಸ್ಯರು ಒಂದು ವಿಚಾರವನ್ನು ತಿಳಿದುಕೊಳ್ಳಬೇಕು, ಅನೇಕ ವಿಷಯಾದಲ್ಲ ಅನೇಕ ಪದಗಳನ್ನು ಉಪಯೋಗ ಮಾಡುತ್ತಾರೆ.

Simply because some Members come and make a representation to me that such and such an officer should be transferred, I said that my policy is not to transfer him on such representation.

Sri P. V. AITHALA.—Is it a fact that the Special Deputy Commissioner, Harbour and Railways, is in Mangalore for more than five years or nearly five years in spite of representations made by all the Opposition Members of the Legislative Assembly for his transfer? Is he retained there because he goes against the wishes of the people and does not provide rehabilitation facilities ?

Sri VEERENDRA PATIL.—The question is not relevant since the main question refers only to the Deputy Commissioner of South Kanara.

Sri P. V. AITHALA.—Is he not a Deputy Commissioner ?

Sri VEERENDRA PATIL.—He is not the Deputy Commissioner for South Kanara Ditrict. He is a Special Deputy Commissioner for Rehabilitation as also for acquisition of lands required not only for the Harbour but also for the railway line from Hassan to Mangalore.

ಶ್ರೀ ಕೆ. ರತ್ನಕುಮಾರಶೆಟ್ಟಿ.—ಸ್ವಾಮಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಮ್ಮ ವಿಚಾರದಲ್ಲಿ ಒಳ್ಳೆಯ ಹೆಸರು ಕೇಳಿಬರುತ್ತಿದೆ. ಆದರೆ ಈ ಮನೆಯ ಸದಸ್ಯರಾದ ಶ್ರೀಮತಿ ಲೀಲಾವತಿ ರೈ ಅವರು ಮತ್ತು ಮಾನ್ಯ ಆಹಾರ ಮಂತ್ರಿಗಳಾದ ಶ್ರೀ ವಿಠಲದಾಸ್ ಶೆಟ್ಟಿಯವರು ತಮಗೆ ಬೇಕಾದ ಅಧಿಕಾರಿಯನ್ನು ತಮ್ಮ ಏರಿಯಾಕ್ಕೆ ಪೋಸ್ಟ್ ಮಾಡಿಸಿಕೊಂಡು, ಊರಿನಲ್ಲಿರತಕ್ಕ ನಾಗರಿಕರಲ್ಲಿ ಭಯ ಹುಟ್ಟಿಸಿ ಅಪರಿಧವ ರೀತಿ ವ್ಯವಹರಿಸಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀರ್.—ಆ ರೀತಿ ವ್ಯವಹರಿಸಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಇಂಡಿ ಸಬ್‌ಡಿವಿಜನ್ ಆಫೀಸರನ್ನು ಶ್ರೀ ಗುರುದಿಣ್ಣಿಯವರು ಪತ್ರಬರೆದಿದ್ದಾರೆಂದು ಎರಡು ವರ್ಷದೊಳಗೇ ಅವರನ್ನು ಬೇರೆ ಕಡೆ ವರ್ಗ ಮಾಡಿದ್ದೀರಿ, ಹಾಗೆಯೇ ದೊಡ್ಡಬಳ್ಳಾಪುರದಲ್ಲಿ ಒಬ್ಬರು ಎಂ.ಎಲ್.ಎ. ಹೇಳಿದ್ದಾರೆಂದು ಅಲ್ಲಿಯ ಸಬ್ ಡಿವಿಜನ್ ಆಫೀಸರನ್ನು ಬೇರೆ ಕಡೆ ವರ್ಗ ಮಾಡಿದ್ದೀರಿ, ಈ ಎರಡು ಕೇಸುಗಳ ವಿಚಾರದಲ್ಲಿ ತಾವು ಏನು ಹೇಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೂ ಇಲ್ಲಿ ಬಂದಿರುವ ಪ್ರಶ್ನೆಗೂ ಸಂಬಂಧ ಇಲ್ಲ: ಈ ಪ್ರಶ್ನೆಗೆ ಸಂಬಂಧಪಟ್ಟಹಾಗೆ ಕೇಳಿದರೆ ನಾನು ಹೇಳುತ್ತೇನೆ.

Mr. SPEAKER.—The hon. Member should realise that the question relates to the specific case of the Deputy Commissioner, South Kanara, and the Assistant Commissioner, South Kanara, and the Superintendents of Police, Mysore, Chikmagalur, Coorg and South Kanara Districts. If the hon. Member puts general questions, the hon. Chief Minister may not be ready with the information relating to other officers. If the hon. Members put supplementaries only with regard to Officers mentioned in the main question, I will permit them. Probably the members from South Kanara are acquainted with this matter but it may not be known to other Members.

Sri D. B. KALMANKAR.—It has been replied that there was a case where the Deputy Commissioner has not been transferred after three years. Is it not a fact that the Deputy Commissioner of Gulbarga has been retained there for four years and is not transferred because he is liked by the party in power?

Sri VEERENDRA PATIL.—I have stated that this question pertains to the Deputy Commissioner and Assistant Commissioner of South Kanara. If the hon. Member wants to know anything about the Deputy Commissioner and Assistant Commissioner of Gulbarga, let him put another question.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮುಖ್ಯ ಮಂತ್ರಿಗಳು ಯಾರ ಒತ್ತಾಯವಿಲ್ಲದೆ, ಪ್ರಭಾವವಿಲ್ಲದೆ ನ್ಯಾಯಬದ್ಧವಾಗಿ, ಕ್ರಮಬದ್ಧವಾಗಿ, ಶಾಸನ ಬದ್ಧವಾಗಿ ವರ್ಗಾವಣೆ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ನಮ್ಮ ಹರಿಜನರ ವರ್ಗಾವಣೆಯನ್ನು ನೋಡಿದರೆ ರಾಚಯ್ಯ ಎಂಬ ಜೀಪ್ ಆಫೀಸರನ್ನು ಮೈಸೂರಿನಿಂದ 15 ದಿವಸಗಳಲ್ಲಿ ವರ್ಗ ಮಾಡಿದ್ದಾರೆ. ಈ ರೀತಿ ಅನಾವಶ್ಯಕವಾಗಿ ವರ್ಗಾವಣೆ ಮಾಡುವುದನ್ನು ನಿಲ್ಲಿಸಿ ಹರಿಜನರ ಹಿತ ರಕ್ಷಣೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರುಗಳಿಗೆ ಪದೇ ಪದೇ ಹೇಳುತ್ತಿದ್ದೇನೆ. ವರ್ಗಾ ಮಾಡುವ ಮುನ್ನ ಇವರು ಹರಿಜನರು, ಒಕ್ಕಲಿಗರು, ಬ್ರಾಹ್ಮಣರು, ಲಿಂಗಾಯಿತರು ಎಂದು ಜಾತಿ ನೋಡಿಕೊಂಡು ಮಾಡುತ್ತಿಲ್ಲ. ಮಾಡುವ ಕಾಲದಲ್ಲಿ ಮಾಡಬೇಕಾಗುತ್ತದೆ. ಅನೇಕ ಸಲ ಪ್ರಮೋಷನ್ಸ್ ಬರುತ್ತದೆ.....

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ವರ್ಗ ಮಾಡುತ್ತಿರುವುದರಲ್ಲಿ ನಿಯಮವಿಲ್ಲ ನೀತಿಯಿಲ್ಲ, ಮನಸ್ಸಿಗೆ ಬಂದಂತೆ ಮಾಡುತ್ತೀರಿ. ಇದಕ್ಕೆ ಇನ್‌ಫ್ಲುಯೆನ್ಸ್ ಕಾರಣ ಎಂದು ಹೇಳುತ್ತೇನೆ. ಇದಕ್ಕೆ ಮುಖ್ಯ ಮಂತ್ರಿಗಳ ಅಭಿಪ್ರಾಯವೇನು?

ಶ್ರೀ ವೀರೇಂದ್ರ ಪಾಟೀಲ್.—ಪ್ರಶ್ನೆ ಹಾಕಿದವರು ನಾನು ಪೂರ್ತಿ ಹೇಳುವವರೆಗೂ ಕೇಳಬೇಕು. ಜಾತಿ ಆಧಾರದ ಮೇಲೆ ವರ್ಗ ಮಾಡುವಹಾಗಿಲ್ಲ ಮತ್ತು ರದ್ದು ಮಾಡುವಹಾಗಿಲ್ಲ. ಅವಕಾಶ ಬಂದಾಗ ಕಾನೂನು ಪ್ರಕಾರ ಮಾಡಬೇಕಾಗುತ್ತದೆ. ಪ್ರಮೋಷನ್ ಬಂದಾಗ ಮಾಡಬೇಕಾಗುತ್ತದೆ. ಕೆಲವು ಕಡೆ ಕೆಲವರು ಲೀವ್ ಹೋಗುತ್ತಾರೆ. ಆಗ ಬೇರೆಯವರನ್ನು ವರ್ಗ ಮಾಡಬೇಕಾಗುತ್ತದೆ. ಹೊಸದಾಗಿ ಪೇಕೆನ್ಸಿ ಬಿದ್ದಾಗ ಮಾಡಬೇಕಾಗುತ್ತದೆ. ಪ್ರತಿಯೊಂದನ್ನೂ ನೋಡಿಕೊಂಡು ಮಾಡಬೇಕಾಗುತ್ತದೆ. ಜಾತಿಯ ಆಧಾರದಮೇಲೆ ಮಾಡುವುದಕ್ಕಾಗುವುದಿಲ್ಲ.

Sri S. SIVAPPA.—There are cases of Assistant Commissioners and Deputy Commissioners who have been transferred within a period of three years in the interest of public service, for special reasons and exigencies of administration. ಮೂರು ವರ್ಷದೊಳಗೆ ವರ್ಗಾ ಮಾಡಿದ್ದರೆ ಬೇರೆ ಏನು ಸ್ಪೆಷಲ್ ಅಲಗೇಷನ್ ಇತ್ತು?

ಶ್ರೀ ವೀರೇಂದ್ರ ಪಾಟೀಲ್.—ಅಲಗೇಷನ್ ಇತ್ತು ಎಂದು ಹೇಳಲಿಲ್ಲ. ಪ್ರತಿಯೊಂದು ಸಾರಿ ವರ್ಗ ಆದಾಗಲೆಲ್ಲಾ ಏಕೆ ಮಾಡಿದಿರಿ ಎಂದು ಕೇಳಿದರೆ, ಅದಕ್ಕೆ ಸರ್ಕಾರ ಉತ್ತರ ಹೇಳುವುದಕ್ಕಾಗುವುದಿಲ್ಲ.

Mr. SPEAKER.—Question Hour is over.